**ದ್ವಿತೀಯ ಪಿಯುಸಿ ಅರ್ಥಶಾಸ್ತ್ರ**
**ಕಡಿತಗೊಂಡ ಪಠ್ಯಕ್ರಮಕ್ಕೆ 2020–21**

ಸಮಯ: 3–15 ಗಂಟೆ **ಮಾದರಿ ಪ್ರಶ್ನೆ ಪತ್ರಿಕೆ–1** ಗರಿಷ್ಠ ಅಂಕ: 100

**ಸೂಚನೆಗಳು: 1. ಪ್ರಶ್ನೆಗಳ ಕ್ರಮಸಂಖ್ಯೆಯನ್ನು ಪಕ್ಕಬದಿಯಲ್ಲಿ ಸ್ಪಷ್ಟವಾಗಿ ಬರೆಯಿರಿ.**
**2. ಒಂದು ಪ್ರಶ್ನೆಗೆ ಉತ್ತರ ನಿರಂತರವಾಗಿರಲಿ.**

**ಭಾಗ – ಎ**

**I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **5x1 =5**

1. ಒಂದು ಆರ್ಥಿಕತೆಯು ಒಳಗೊಂಡಿರುವ ಕೇಂದ್ರೀಯ ಸಮಸ್ಯೆಗಳು

(a) ಏನನ್ನು ಉತ್ಪಾದಿಸಬೇಕು (b) ಹೇಗೆ ಉತ್ಪಾದಿಸಬೇಕು

(c) ಯಾರಿಗಾಗಿ ಉತ್ಪಾದಿಸಬೇಕು (d) ಮೇಲಿನ ಎಲ್ಲವೂ ಹೌದು

2. ಲಂಬಾಂತರ ಬೇಡಿಕೆ ರೇಖೆಯು ಹೊಂದಿರುವುದು

(a) ಪರಿಪೂರ್ಣ ಸ್ಥಿತಿಸ್ಥಾಪಕತ್ವ (b) ಪರಿಪೂರ್ಣ ಅಸ್ಥಿತಿಸ್ಥಾಪಕತ್ವ

(c) ಸರಿಸಮಾನ ಸ್ಥಿತಿಸ್ಥಾಪಕತ್ವ (d) ಮೇಲಿನ ಯಾವುದೂ ಅಲ್ಲ

3. ಎಲ್ಲಾ ಉತ್ಪಾದನಾಂಗಗಳ ಪಾವತಿಗಳ ಮೊತ್ತವನ್ನು ಮಾಪನ ಮಾಡುವುದಕ್ಕೆ

(a) ಉತ್ಪನ್ನ ವಿಧಾನ (b) ವೆಚ್ಚದ ವಿಧಾನ (c) ಆದಾಯದ ವಿಧಾನ (d) ಮೇಲಿನ ಯಾವುದೂ ಅಲ್ಲ

4. ಹಣದ ಪ್ರಮುಖ ಕಾರ್ಯ

(a) ಉಳಿತಾಯ (b) ವೆಚ್ಚ (c) ವಿನಿಮಯ ಮಾಧ್ಯಮ (d) ಹೂಡಿಕೆ

5. ಆದಾಯದಿಂದ ಸ್ವತಂತ್ರವಾದ ಅನುಭೋಗವು

(a) ಪ್ರೇರಿತ ಅನುಭೋಗವಾಗಿದೆ. (b) ಸ್ವಾಯತ್ತ ಅನುಭೋಗವಾಗಿದೆ.

(c) ವ್ಯರ್ಥ ಅನುಭೋಗವಾಗಿದೆ. (d) ಹಿಂದಿನ ಅನುಭೋಗವಾಗಿದೆ.

**II. ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ.** **5x1 =5**

6. ಸರಕೊಂದರ ಬೇಡಿಕೆಯು ಅದರ ಬೆಲೆಯೊಂದಿಗೆ ______________ ದಿಕ್ಕಿನಲ್ಲಿ ಚಲಿಸುತ್ತದೆ.
7. ಸೀಮಾಂತ ಉತ್ಪನ್ನ ಮತ್ತು ಸರಾಸರಿ ಉತ್ಪನ್ನ ರೇಖೆಗಳೆರಡೂ __________ ಆಕಾರದಲ್ಲಿವೆ.
8. ಒಂದು ಬೆಲೆ ಪಡೆಯುವ ಉದ್ಯಮ ಘಟಕಕ್ಕೆ ಸೀಮಾಂತ ಆದಾಯವು _______ ಗೆ ಸಮನಾಗಿರುತ್ತದೆ.
9. ಭೂಮಿಯು ಸಲ್ಲಿಸಿದ ಸೇವೆಗೆ ಆದಾಯದ ಒಂದು ಭಾಗವನ್ನು _________ ರೂಪದಲ್ಲಿ ಪಾವತಿಸಲಾಗುತ್ತದೆ.
10 ಭಾರತದಲ್ಲಿ ನಾಣ್ಯಗಳನ್ನು __________ ಚಲಾವಣೆಗೆ ತರುತ್ತದೆ.

**III. ಹೊಂದಿಸಿ ಬರೆಯಿರಿ.** **5x1 =5**

11.

| A | B |
|---|---|
| 1. ಕೇಂದ್ರೀಯ ಯೋಜಿತ ಆರ್ಥಿಕತೆ | a) ಪರಿಪೂರ್ಣ ಮಾಹಿತಿ |
| 2. ಔದಾಸೀನ್ಯ ನಕ್ಷೆ | b) ಕೂಲಿ |
| 3. ಪರಿಪೂರ್ಣ ಪೈಪೋಟಿ | c) ಸರ್ಕಾರ |
| 4. ಶ್ರಮ | d) ಮಧ್ಯವರ್ತಿ ಸರಕು |
| 5. ಕಚ್ಚಾ ಸರಕು | e) ಔದಾಸೀನ್ಯ ವಕ್ರರೇಖೆಗಳ ಕುಟುಂಬ |

**IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.** **5x1=5**

12. MRS ನ್ನು ವಿಸ್ತರಿಸಿ.
13. ಒಟ್ಟು ಸ್ಥಿರ ವೆಚ್ಚ ಎಂದರೇನು?
14. ಆಮದುಗಳ ಅರ್ಥ ನೀಡಿ.
15. ವೈಯಕ್ತಿಕ ವೆಚ್ಚ ಮಾಡಬಹುದಾದ ಆದಾಯವನ್ನು ಹೇಗೆ ಪಡೆಯುತ್ತೇವೆ?
16. ವಸ್ತು ವಿನಿಮಯ ಪದ್ಧತಿ ಎಂದರೇನು?

## ಭಾಗ – ಬಿ

**V. ಕೆಳಗಿನ ಯಾವುದಾದರೂ ಒಂಭತ್ತು ಪ್ರಶ್ನೆಗಳಿಗೆ 4 ವಾಕ್ಯಗಳಲ್ಲಿ ಉತ್ತರಿಸಿ.** **9x2 =18**

17. ವಾಸ್ತವಿಕ ಅರ್ಥಶಾಸ್ತ್ರ ಮತ್ತು ಮಾದರಿ ಅರ್ಥಶಾಸ್ತ್ರದ ನಡುವಿನ ವ್ಯತ್ಯಾಸವನ್ನು ತಿಳಿಸಿ.
18. ಅನುಭೋಗಿಯ ವರ್ತನೆಯನ್ನು ವಿವರಿಸುವ ಎರಡು ವಿಧಾನಗಳನ್ನು ತಿಳಿಸಿ.
19. ಕೆಳದರ್ಜೆಯ ಸರಕುಗಳೆಂದರೇನು? ಉದಾಹರಣೆ ಕೊಡಿ.
20. ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವ ಎಂದರೆ ಏನೆಂದು ಅರ್ಥೈಸುವಿರಿ.
21. ಅಲ್ಪಾವಧಿ ಮತ್ತು ದೀರ್ಘಾವಧಿ ಪರಿಕಲ್ಪನೆಗಳ ಅರ್ಥ ನೀಡಿ.
22. ದೀರ್ಘಾವಧಿ ವೆಚ್ಚಗಳಾವುವು?
23. ಸ್ಥಗಿತತೆಯ ಬಿಂದುವಿನ ಅರ್ಥ ನೀಡಿ.
24. ಬಂಡವಾಳಶಾಹಿ ಆರ್ಥಿಕತೆಯ ಲಕ್ಷಣಗಳಾವುವು?
25. ಅನುಭೋಗಿ ಸರಕುಗಳು ಮತ್ತು ಬಂಡವಾಳ ಸರಕುಗಳ ನಡುವಿನ ವ್ಯತ್ಯಾಸವೇನು?
26. ಬಾಹ್ಯತೆಗಳೆಂದರೆ ಏನೆಂದು ಅರ್ಥೈಸುವಿರಿ? ಅದರ ಎರಡು ವಿಧಗಳನ್ನು ತಿಳಿಸಿ.
27. ನಾಮಮಾತ್ರ ಮತ್ತು ನೈಜ GDP ಗಳ ನಡುವಿನ ವ್ಯತ್ಯಾಸ ಬರೆಯಿರಿ.
28. ಹಣದ ಬೇಡಿಕೆಯ ಎರಡು ಉದ್ದೇಶಗಳನ್ನು ತಿಳಿಸಿ.
29. ಹೂಡಿಕೆ ಗುಣಕದ ಅರ್ಥವನ್ನು ನೀಡಿ ಮತ್ತು ಅದರ ಸೂತ್ರವನ್ನು ಬರೆಯಿರಿ.
30. ಮಿತವ್ಯಯದ ವಿರೋಧಾಬಾಸದ ಅರ್ಥವನ್ನು ನೀಡಿ.

## ಭಾಗ – ಸಿ

**VI. ಕೆಳಗಿನ ಯಾವುದಾದರೂ ಏಳು ಪ್ರಶ್ನೆಗಳಿಗೆ 12 ವಾಕ್ಯಗಳಲ್ಲಿ ಉತ್ತರಿಸಿ.** **7x4 =28**

31. ಮಾರುಕಟ್ಟೆ ಆರ್ಥವ್ಯವಸ್ಥೆಯ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.
32. ಬಜೆಟ್ ರೇಖೆಯ ಇಳಿಜಾರಿನ ನಿಷ್ಪತ್ತಿಯನ್ನು ರೇಖಾಚಿತ್ರದೊಂದಿಗೆ ವಿವರಿಸಿ.
33. ಬದಲಿ ಸರಕು ಮತ್ತು ಪೂರಕ ಸರಕುಗಳ ನಡುವಿನ ವ್ಯತ್ಯಾಸಗಳನ್ನು ವಿವರಿಸಿ.
34. ಈ ಕೆಳಗಿನ ಕೋಷ್ಟಕವು ಶ್ರಮದ ಒಟ್ಟು ಉತ್ಪನ್ನ ($TP_L$) ಪಟ್ಟಿಯನ್ನು ನೀಡುತ್ತದೆ. $AP_L$ ಮತ್ತು $MP_L$ ಗಳನ್ನು ಕಂಡುಹಿಡಿಯಿರಿ.

| | | | | | | |
|---|---|---|---|---|---|---|
| $TP_L$ | 0 | 15 | 35 | 50 | 40 | 48 |
| L | 0 | 1 | 2 | 3 | 4 | 5 |

35. ಈ ಕೆಳಗಿನ ಷರತ್ತುಗಳಡಿಯಲ್ಲಿ ಪರಿಪೂರ್ಣ ಪೈಪೋಟಿಯಲ್ಲಿ ಉದ್ಯಮ ಘಟಕದ ಲಾಭ ಗರಿಷ್ಠಗೊಳಿಸುವಿಕೆಯ ಬಗ್ಗೆ ಸಂಕ್ಷಿಪ್ತ ಟಿಪ್ಪಣಿಯನ್ನು ಬರೆಯಿರಿ. (a) P=MC (b) MCಯು $q_0$ ದಲ್ಲಿ ಇಳಿಕೆಯಾಗುವುದಿಲ್ಲ.
36. ಉದ್ಯಮ ಘಟಕದ ಪೂರೈಕೆ ರೇಖೆಯ ನಿರ್ಧಾರಕಗಳನ್ನು ವಿವರಿಸಿ.
37. ಸಮಗ್ರ ಅರ್ಥಶಾಸ್ತ್ರವು ಸೂಕ್ಷ್ಮ ಅರ್ಥಶಾಸ್ತ್ರಕ್ಕಿಂತ ಯಾವ ರೀತಿಯಲ್ಲಿ ಭಿನ್ನವಾಗಿದೆ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿ.
38. ಅಂತಿಮ ಸರಕುಗಳ ಪರಿಕಲ್ಪನೆಯನ್ನು ಕುರಿತು ಲಘು ಟಿಪ್ಪಣಿಯನ್ನು ಬರೆಯಿರಿ.
39. ತಪಶೀಲು ಪಟ್ಟಿಯ ಯೋಜಿತ ಸಂಗ್ರಹಣೆ ಮತ್ತು ಕುಸಿತದ ಉದಾಹರಣೆಯನ್ನು ವಿವರಿಸಿ.
40. ಹಣದ ಶಾಸನಬದ್ಧ ವ್ಯಾಖ್ಯಾನಗಳನ್ನು ಕುರಿತು ಒಂದು ಟಿಪ್ಪಣಿ ಬರೆಯಿರಿ.
41. ಅನುಭೋಗ ಬಿಂಬಕವನ್ನು ಸಂಕ್ಷಿಪ್ತವಾಗಿ ವಿವರಿಸಿ.

## ಭಾಗ – ಡಿ

**VII. ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ 20 ವಾಕ್ಯಗಳಲ್ಲಿ ಉತ್ತರಿಸಿ.** **4x6 =24**

42. ಇಳಿಮುಖ ಸೀಮಾಂತ ತುಷ್ಟಿಗುಣ ನಿಯಮವನ್ನು ಕೋಷ್ಟಕ ಮತ್ತು ರೇಖಾಚಿತ್ರದ ಸಹಾಯದಿಂದ ವಿವರಿಸಿ.
43. ವಿವಿಧ ಅಲ್ಪಾವಧಿ ವೆಚ್ಚಗಳನ್ನು ವಿವರಿಸಿ.
44. ಪರಿಪೂರ್ಣ ಪೈಪೋಟಿ ಮಾರುಕಟ್ಟೆಯಲ್ಲಿ ಉದ್ಯಮ ಘಟಕವೊಂದರ ಒಟ್ಟು ಆದಾಯ ಮತ್ತು ಸರಾಸರಿ ಆದಾಯವನ್ನು ರೇಖಾಚತ್ರಗಳ ಸಹಾಯದಿಂದ ವಿವರಿಸಿ.
45. ಸಮಗ್ರ ಆರ್ಥಿಕ ಅನನ್ಯತೆಗಳನ್ನು ವಿವರಿಸಿ.
46. GDP ಯನ್ನು ಒಂದು ದೇಶದ ಯೋಗಕ್ಷೇಮದ ಸೂಚ್ಯಂಕವಾಗಿ ಬಳಸಿಕೊಳ್ಳುವುದರ ಮಿತಿಗಳನ್ನು ಬರೆಯಿರಿ.
47. ಮೀಸಲುಗಳ ಅಗತ್ಯವು ಹಣದ (ಸಾಲದ) ನಿರ್ಮಾಣಕ್ಕೆ ಒಂದು ಮಿತಿಯಾಗಿದೆ ವಿವರಿಸಿ.
48. ಗುಣಕದ ಯಾಂತ್ರಿಕತೆಯನ್ನು ವಿವರಿಸಿ.

## ಭಾಗ – ಇ

**VIII. ಕೆಳಗಿನ ಯಾವುದಾದರೂ ಎರಡು ಕಾರ್ಯಭಾರ ಮತ್ತು ನಿಯೋಜನೆ ಆಧಾರಿತ ಪ್ರಶ್ನೆಗಳಿಗೆ ಉತ್ತರಿಸಿ.** **2x5 =10**

49. ಒಬ್ಬ ಅನುಭೋಗಿಯು ಎರಡು ಸರಕುಗಳನ್ನು ಅನುಭೋಗಿಸಲು ಬಯಸುತ್ತಾಳೆ. ಬಾಳೆಹಣ್ಣಿನ ಬೆಲೆ ರೂ.5 ಮತ್ತು ಮಾವಿನ ಹಣ್ಣಿನ ಬೆಲೆ ರೂ. 10 ಆಗಿದ್ದು, ಅನುಭೋಗಿಯ ಆದಾಯ ರೂ. 40 ಆಗಿದೆ. ಈ ಕೆಳಗಿನವುಗಳಿಗೆ ಉತ್ತರಿಸಿ.
    (ಎ) ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚು ಮಾಡಿ ಎಷ್ಟು ಪ್ರಮಾಣದ ಬಾಳೆಹಣ್ಣನ್ನು ಅನುಭೋಗಿಸಬಹುದು?
    (ಬಿ) ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚು ಮಾಡಿ ಎಷ್ಟು ಪ್ರಮಾಣದ ಮಾವಿನ ಹಣ್ಣನ್ನು ಅನುಭೋಗಿಸಬಹುದು?
    (ಸಿ) ಬಜೆಟ್ ರೇಖೆಯ ಇಳಿಜಾರು ಕೆಳಮುಖ ಅಥವಾ ಮೇಲ್ಮುಖವಾಗಿರುತ್ತದೆಯೇ?
    (ಡಿ) ಬಜೆಟ್ ರೇಖೆಯ ಮೇಲಿನ ಎಲ್ಲಾ ಸಂಯೋಜನೆಗಳು ಅನುಭೋಗಿಯ ಆದಾಯಕ್ಕೆ ಸಮನಾಗಿರುತ್ತವೆಯೇ ಅಥವಾ ಇಲ್ಲವೇ?
    (ಇ) ಒಂದು ಬಾಳೆಹಣ್ಣನ್ನು ಹೆಚ್ಚುವರಿಯಾಗಿ ಪಡೆಯಲು ಮಾವಿನ ಹಣ್ಣನ್ನು ಬಿಟ್ಟುಕೊಡಬೇಕಾಗುತ್ತದೆ. ಇದು ಸರಿಯೇ?

50. ಕೆಳಗೆ ನೀಡಿರುವ ಕೋಷ್ಟಕದಲ್ಲಿ ಸರಕಿನ ಪ್ರತಿ ಘಟಕದ ಮಾರುಕಟ್ಟೆ ಬೆಲೆ ರೂ. 10 ಇದ್ದಾಗ ಒಟ್ಟು ಆದಾಯ, ಸೀಮಾಂತ ಆದಾಯ ಮತ್ತು ಸರಾಸರಿ ಆದಾಯದ ಅನುಸೂಚಿಗಳ ಲೆಕ್ಕಾಚಾರ ಮಾಡಿ.

| ಮಾರಾಟ ಪ್ರಮಾಣ (q) | TR | MR | AR |
|---|---|---|---|
| 0 | | | |
| 1 | | | |
| 2 | | | |
| 3 | | | |
| 4 | | | |
| 5 | | | |
| 6 | | | |

**(ಅಂಧ ವಿಧ್ಯಾರ್ಥಿಗಳಿಗೆ ಮಾತ್ರ)**

ಒಟ್ಟು ಆದಾಯ, ಸೀಮಾಂತ ಆದಾಯ, ಮತ್ತು ಸರಾಸರಿ ಆದಾಯಗಳ ಅರ್ಥವನ್ನು ವಿವರಿಸಿ.

51. ಅನಾಣ್ಯೀಕರಣ ಅಥವಾ ಹಣದ ಅಮಾನ್ಯೀಕರಣ (ನೋಟು ರದ್ಧತಿ) ದ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

****

**II PUC ECONOMICS**

**FOR REDUCED SYLLABUS 2020-21**

Time : 3 Hours 15 minutes **Model Question Paper-1** [Max. Marks: 100]

**Instruction: 1. Write the question numbers legibly in the margin.**

**2. Answer for a question should be continuous.**

## PART – A

**I. Choose the correct answer:** **5x1 =5**

1. Central problems of an economy includes

   a) What to produce b) How to produce
   c) For whom to produce d) All of the above

2. A vertical demand curve is

   a) Perfectly elastic b) Perfectly inelastic
   c) Unitary elastic d) None of the above

3. Measuring the sum total of all factor payments will be called

   a) Product method b) Expenditure method
   c) Income method d) none of the above

4. The main function of money is

   a) Saving b) expenditure
   c) medium of exchange d) investment

5. Consumption which is independent of income is called

   a) Induced consumption c) Wasteful consumption
   b) Autonomous consumption d) Past consumption

**II. Fill in the blanks:** **5x1 =5**

6. The demand for a good moves in the ________ direction of its price.

7. Marginal product and Average product curves are _______in shape.

8. For price taking firm marginal revenue is equal to _______

9. A part of revenue is paid out as ________ for the service rendered by land.
10. _____________ issues coins in India.

**III. Match the following:** **5x1 =5**

11.

| A | | B | |
|---|---|---|---|
| 1. | Centrally planned economy | a) | Perfect information |
| 2. | Indifference map | b) | Wages |
| 3. | Perfect competition | c) | Government |
| 4. | Labour | d) | Intermediate good |
| 5. | Raw material | e) | A family of indifferent curve |

**IV. Answer the following question in a sentence/word.** **5x1 =5**

12. Expand MRS.
13. What is total fixed cost?
14. Give the meaning of imports.
15. How do we get personal disposable income?
16. What do you mean by barter system?

## PART – B

**V. Answer any NINE of the following questions in 4 sentences each.** **9x2 =18**

17. Distinguish between positive and Normative Economics.
18. Mention two different approaches which explain consumer behavior.
19. What do you mean by inferior goods? Give example.
20. What do you mean by price elasticity of demand?
21. Give the meaning of the concept of short-run and long run.
22. What are long run costs?
23. Give the meaning of shut down point.
24. What are the features of capitalistic economy?
25. What is the difference between consumer goods and capital goods?
26. What do you mean by externalities? Mention its two types?
27. Write the difference between nominal and real GDP.
28. Mention two motives of demand for money.
29. Give the meaning of investment multiplier. Write its formula.
30. Give the meaning of Paradox of thrift.

## PART – C

**VI. Answer any SEVEN of the following questions in 12 sentences each.** **7x4 =28**

31. Write a short note on a market economy.

32. Explain the derivation of slope of budget line with a diagram.
33. Write the differences between substitutes and complements.

34. The following table gives the $TP_{L.}$ Find the $AP_L$ and $MP_L$.

| $TP_L$ | 0 | 15 | 35 | 50 | 40 | 48 |
|---|---|---|---|---|---|---|
| L | 0 | 1 | 2 | 3 | 4 | 5 |

35. Write a short note on profit maximization of a firm under the following conditions

a) P=MC b) MC must be non-decreasing at $q_0$

36. Explain the determinants of a firm's supply curve.
37. Briefly explain in what way Macro Economics is different from Micro Economics.
38. Write a short note on the concept of final good.
39. Explain the examples of planned accumulation and decumulation of inventories.
40. Write a note on legal definitions of money.
41. Briefly explain the consumption function.

## PART – D

**VII Answer any FOUR of the following questions in 20 sentences each. 4x6 =24**

42. Explain the law of diminishing marginal utility with the help of a table and diagram.
43. Explain the various short run costs
44. Explain the total revenue and marginal revenue of a firm under perfect competition with the help of diagrams.
45. Explain the Macro Economic identities.
46. Write down the limitations of using GDP as an index of welfare of a country.
47. Requirement of reserves acts as a limit to money (credit) creation. Explain
48. Explain the multiplier mechanism.

## PART – E

**VIII. Answer any TWO of the following project oriented questions. 2x5 =10**

49. A consumer wants to consumes two goods. The Price of Bananas is Rs 5 and the price of mango is Rs.10 The consumer income is Rs 40.

a) How much Bananas Can she consumes if she spend her entire income on that good?
b) How much mangoes can she consume if she spend her entire income on that good?
c) Is the slope of budget line downward or up word?
d) Are the Bundles on the budget line equal to the consumer's income or not?
e) If you want to have more of Bananas you have to give up mangoes. Is it true?

50. Compute the total revenue, marginal revenue and average revenue schedules in the

following table when market price of each unit of good is RS 10.

| Quantity sold | TR | MR | AR |
|---|---|---|---|
| 0 | | | |
| 1 | | | |
| 2 | | | |
| 3 | | | |
| 4 | | | |
| 5 | | | |
| 6 | | | |

**(For blind students only)**

Explain the meaning of Total Revenue-TR, Marginal Revenue-MR and Average Revenue-AR

51. Write a note on Demonetization.

****

**ದ್ವಿತೀಯ ಪಿಯುಸಿ ಅರ್ಥಶಾಸ್ತ್ರ**

**ಕಡಿತಗೊಂಡ ಪಠ್ಯಕ್ರಮಕ್ಕೆ 2020–21**

ಸಮಯ: 3–15 ಗಂಟೆ **ಮಾದರಿ ಪ್ರಶ್ನೆ ಪತ್ರಿಕೆ–2** ಗರಿಷ್ಠ ಅಂಕ: 100

**ಸೂಚನೆಗಳು: 1.** ಪ್ರಶ್ನೆಗಳ ಕ್ರಮಸಂಖ್ಯೆಯನ್ನು ಪಕ್ಕಬದಿಯಲ್ಲಿ ಸ್ಪಷ್ಟವಾಗಿ ಬರೆಯಿರಿ.

**2.** ಒಂದು ಪ್ರಶ್ನೆಗೆ ಉತ್ತರ ನಿರಂತರವಾಗಿರಲಿ.

**ಭಾಗ – ಎ**

**I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **5x1 =5**

1. ಬಜೆಟ್ ರೇಖೆಯ ಸಮೀಕರಣ

   (a) $p\,x + p_1\,x_1 = M$ (b) $M = p_0\,x_0 + p\,x$

   (c) $p_1\,x_1 + p_2\,x_2 = M$ (d) $Y = M\,x + C$

2. ಪರಿಪೂರ್ಣ ಪೈಪೋಟಿ ಮಾರುಕಟ್ಟೆಯಲ್ಲಿ ಉದ್ಯಮ ಘಟಕಗಳು ಉತ್ಪಾದಿಸುವ ಮತ್ತು ಮಾರಾಟ ಮಾಡುವ ಉತ್ಪನ್ನಗಳು

   (a) ವೈವಿದ್ಯಮಯವಾಗಿರುತ್ತವೆ. (b) ಏಕರೂಪವಾಗಿರುತ್ತವೆ

   (c) ವಿಲಾಸಿ ಸರಕುಗಳಾಗಿರುತ್ತವೆ (d) ಅವಶ್ಯಕ ಸರಕುಗಳಾಗಿರುತ್ತವೆ

3. ಮಹಾ ಆರ್ಥಿಕ ಕುಸಿತದ ವರ್ಷ

   (a) 1920 (b) 1889 (c) 1929 (d) 2018

4. ಪ್ರಸಕ್ತ ಚಾಲ್ತಿ ಬೆಲೆಗಳಲ್ಲಿನ GDP ಮೌಲ್ಯವು

   (a) ನೈಜ GDP ಆಗಿದೆ. (b) ಉತ್ಪಾದನಾಂಗಳ ವೆಚ್ಚದಲ್ಲಿ GDP ಆಗಿದೆ.

   (c) ನಾಮಮಾತ್ರ GDP ಆಗಿದೆ. (d) NDP ಆಗಿದೆ.

5. MPC ಯ ಮೌಲ್ಯವು

   (a) 1 ಮತ್ತು 2 ರ ನಡುವೆ ಇರುತ್ತದೆ. (b) 0 ಮತ್ತು 1 ರ ನಡುವೆ ಇರುತ್ತದೆ.

   (c) 2 ಮತ್ತು 4 ರ ನಡುವೆ ಇರುತ್ತದೆ. (d) 0 ಮತ್ತು 0.5 ರ ನಡುವೆ ಇರುತ್ತದೆ.

**II. ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ.** **5x1 =5**

6. ಸಂಪನ್ಮೂಲಗಳ ಕೊರತೆಯು ______________ ಸಮಸ್ಯೆಯನ್ನು ಹುಟ್ಟು ಹಾಕುತ್ತದೆ.

7. ಬಯಕೆಗಳನ್ನು ತೃಪ್ತಿಪಡಿಸುವ ಸರಕಿನ ಸಾಮರ್ಥ್ಯ ______________

8. SMC ರೇಖೆಯು AVC ರೇಖೆಯನ್ನು ಅದರ ಕನಿಷ್ಠ ಬಿಂದುವಿನಲ್ಲಿ ಛೇದಿಸುವ ಬಿಂದುವನ್ನು ________ ಎಂದು ಕರೆಯುತ್ತೇವೆ.

9. ಒಂದು ಉದ್ಯಮಘಟಕವು ಮಾಡಿದ ನಿವ್ವಳ ಕೊಡುಗೆಯನ್ನು ಅದರ __________ ಎನ್ನುತ್ತೇವೆ.

10. ಹಣವನ್ನು ಇಟ್ಟುಕೊಳ್ಳುವ ಮುಖ್ಯ ಉದ್ದೇಶವೆಂದರೆ ____________ ನ್ನು ನಿಭಾಯಿಸುವುದು.

**III. ಹೊಂದಿಸಿ ಬರೆಯಿರಿ.** **5x1 =5**

11.

| A | B |
|---|---|
| 1. ಪೂರಕ ಸರಕುಗಳು | a) ಪರಿಪೂರ್ಣ ಮಾಹಿತಿ |
| 2. LRAC | b) ಹಣರಹಿತ ವಿನಿಮಯ |
| 3. ಪರಿಪೂರ್ಣ ಪೈಪೋಟಿ | c) ದೀರ್ಘಾವಧಿ ಸರಾಸರಿ ವೆಚ್ಚ |
| 4. ಗೃಹಕೃತ್ಯ | d) Y - C |
| 5. ಉಳಿತಾಯ | e) ಪೆನ್ನು ಮತ್ತು ಶಾಯಿ |

**IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.** **5x1 =5**

12. ಸಂಖ್ಯಾ ಸೂಚಕ ತುಷ್ಟಿಗುಣ ವಿಶ್ಲೇಷಣೆ ಎಂದರೇನು?

13 ಅಸಾಮಾನ್ಯ ಲಾಭದ ಅರ್ಥ ನೀಡಿ.

14. ವೈಯಕ್ತಿಕ ವೆಚ್ಚ ಮಾಡಬಹುದಾದ ಆದಾಯವನ್ನು ಹೇಗೆ ಪಡೆಯುತ್ತೇವೆ?

15. ಫಿಯಟ್ ಹಣ ಎಂದರೇನು?

16. ಸ್ವಾಯತ್ತ ಅನುಭೋಗದ ಅರ್ಥವನ್ನು ಬರೆಯಿರಿ.

## ಭಾಗ – ಬಿ

**V. ಕೆಳಗಿನ ಯಾವುದಾದರೂ ಒಂಭತ್ತು ಪ್ರಶ್ನೆಗಳಿಗೆ 4 ವಾಕ್ಯಗಳಲ್ಲಿ ಉತ್ತರಿಸಿ.** **9x2 =18**

17. ಸೂಕ್ಷ್ಮ ಮತ್ತು ಸಮಗ್ರ ಅರ್ಥಶಾಸ್ತ್ರಗಳ ನಡುವಿನ ವ್ಯತ್ಯಾಸವನ್ನು ತಿಳಿಸಿ.

18. ಏಕತಾನಾತ್ಮಕ ಒಲವು ಎಂದರೇನು?

19. ಕೆಳದರ್ಜೆಯ ಸರಕುಗಳೆಂದರೇನು? ಉದಾಹರಣೆ ಕೊಡಿ.

20. ಸಮ ಉತ್ಪನ್ನ ರೇಖೆ ಎಂದರೇನು?

21. ಸದವಕಾಶ ವೆಚ್ಚದ ಅರ್ಥವನ್ನು ಉದಾಹರಣೆ ಸಹಿತ ಬರೆಯಿರಿ.

22. ಬೆಲೆ ಪೂರೈಕೆ ಸ್ಥಿತಿಸ್ಥಾಪಕತ್ವದ ಅರ್ಥವನ್ನು ನೀಡಿ ಮತ್ತು ಅದರ ಸೂತ್ರವನ್ನು ಬರೆಯಿರಿ.

23. ಬಾಹ್ಯ ವಲಯದಲ್ಲಿನ ವ್ಯಾಪಾರದ ಎರಡು ವಿಧಗಳಾವುವು? ಅವುಗಳ ಅರ್ಥ ಬರೆಯಿರಿ.

24. ದಾಸ್ತಾನು ಮತ್ತು ಹರಿವಿನ ನಡುವಿನ ವ್ಯತ್ಯಾಸವನ್ನು ತಿಳಿಸಿ. ಉದಾಹರಣೆಯೊಂದಿಗೆ ವಿವರಿಸಿ.

25. ನಾಲ್ಕು ಉತ್ಪಾದನಾಂಗಗಳಾವುವು? ಅವುಗಳ ಪ್ರತಿಫಲಗಳನ್ನು ತಿಳಿಸಿ.

26. $GDP_{MP}$ ಮತ್ತು $GDP_{FC}$ ಯ ಸಮೀಕರಣಗಳನ್ನು ಬರೆಯಿರಿ.

27. CRR ಮತ್ತು SLR ಗಳ ಅರ್ಥ ನೀಡಿ.

28. ಸಾಲವನ್ನು ನಿಯಂತ್ರಿಸುವ RBI ನ ಸಾಧನಗಳನ್ನು ತಿಳಿಸಿ.

29. ಹೆಚ್ಚುವರಿ ಬೇಡಿಕೆ ಮತ್ತು ಕೊರತೆ ಬೇಡಿಕೆಗಳ ಅರ್ಥವನ್ನು ಬರೆಯಿರಿ.

30. ಹೂಡಿಕೆ ಗುಣಕದ ಅರ್ಥವನ್ನು ನೀಡಿ ಅದರ ಸೂತ್ರವನ್ನು ಬರೆಯಿರಿ.

## ಭಾಗ – ಸಿ

**VI**. **ಕೆಳಗಿನ ಯಾವುದಾದರೂ ಏಳು ಪ್ರಶ್ನೆಗಳಿಗೆ 12 ವಾಕ್ಯಗಳಲ್ಲಿ ಉತ್ತರಿಸಿ.** **7x4 =28**

31. ಕೇಂದ್ರೀಯ ಯೋಜಿತ ಆರ್ಥಿಕತೆಯ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.
32. ಒಟ್ಟು ತುಷ್ಟಿಗುಣ ಮತ್ತು ಸೀಮಾಂತ ತುಷ್ಟಿಗುಣಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.
33. ಬಜೆಟ್ ಗಣವನ್ನು ರೇಖಾಚಿತ್ರದ ಸಹಾಯದಿಂದ ವಿವರಿಸಿ.
34. ಪ್ರತಿಫಲಗಳ ಪ್ರಮಾಣದ ಬಗ್ಗೆ ಒಂದು ಸಂಕ್ಷಿಪ್ತ ಟಿಪ್ಪಣಿಯನ್ನು ಬರೆಯಿರಿ.
35. ಈ ಕೆಳಗಿನ ಷರತ್ತುಗಳಡಿಯಲ್ಲಿ ಪರಿಪೂರ್ಣ ಪೈಪೋಟಿಯಲ್ಲಿ ಉದ್ಯಮ ಘಟಕದ ಲಾಭ ಗರಿಷ್ಠಗೊಳಿಸುವಿಕೆಯ ಬಗ್ಗೆ ಸಂಕ್ಷಿಪ್ತ ಟಿಪ್ಪಣಿಯನ್ನು ಬರೆಯಿರಿ. (a) P=MC (b) MCಯು $q_0$ ದಲ್ಲಿ ಇಳಿಕೆಯಾಗುವುದಿಲ್ಲ.
36. ಬಂಡವಾಳಶಾಹಿ ದೇಶದ ಆರ್ಥಿಕತೆಯ ಕಾರ್ಯವೈಖರಿಯನ್ನು ವಿವರಿಸಿ.
37. ಬಾಹ್ಯತೆಗಳನ್ನು ಕುರಿತು ಟಿಪ್ಪಣಿ ಬರೆಯಿರಿ.
38. ಒಂದು ಆರ್ಥಿಕತೆಯ ವೃತ್ತಾಕಾರದ ಚಲನೆಯನ್ನು ವಿವಿರಿಸಿ.
39. ಯೋಜಿತವಲ್ಲದ ತಪಶೀಲು ಪಟ್ಟಿಯ ಶೇಖರಣೆ ಮತ್ತು ಕುಸಿತವನ್ನು ಉದಾಹರಣೆಯೊಂದಿಗೆ ವಿಷಧಪಡಿಸಿ.
40. RBIನ ಕಾರ್ಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
41. ಅನುಭೋಗ ಬಿಂಬಕವನ್ನು ಸಂಕ್ಷಿಪ್ತವಾಗಿ ವಿವರಿಸಿ.

## ಭಾಗ – ಡಿ

**VII**. **ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ 20 ವಾಕ್ಯಗಳಲ್ಲಿ ಉತ್ತರಿಸಿ.** **4x6 =24**

42. ಔದಾಸೀನ್ಯ ವಕ್ರರೇಖೆಯ ಲಕ್ಷಣಗಳನ್ನು ರೇಖಾಚಿತ್ರಗಳೊಂದಿಗೆ ವಿವರಿಸಿ.
43. ಅನುಭೋಗಿಯ ಆದರ್ಶ ಆಯ್ಕೆಯನ್ನು ರೇಖಾಚಿತ್ರದ ಸಹಾಯದಿಂದ ವಿವರಿಸಿ.
44. ಒಂದು ಉದ್ಯಮ ಘಟಕದ SMC ವಿವರ ಪಟ್ಟಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ. ಒಂದು ಉದ್ಯಮ ಘಟಕದ ಸ್ಥಿರ ವೆಚ್ಚ 100 ಇದ್ದಾಗ, ಉದ್ಯಮ ಘಟಕದ TVC, TC, AVC ಮತ್ತು SAC ಗಳ ವಿವರ ಪಟ್ಟಿಯನ್ನು ಕಂಡುಹಿಡಿಯಿರಿ.

| **Q** | 0 | 1 | 2 | 3 | 4 | 5 | 6 |
|---|---|---|---|---|---|---|---|
| **SMC** | -- | 500 | 300 | 200 | 300 | 500 | 800 |

45. ಮಾರುಕಟ್ಟೆ ಪೂರೈಕೆಯ ರೇಖೆಯನ್ನು ರೇಖಾಚಿತ್ರದೊಂದಿಗೆ ವಿವರಿಸಿ.
46. GDPಯನ್ನು ಮಾಪನ ಮಾಡುವ ವೆಚ್ಚದ ವಿಧಾನವನ್ನು ಸಂಕ್ಷಿಪ್ತವಾಗಿ ವಿವರಿಸಿ.
47. ಹಣದ ಕಾರ್ಯಗಳನ್ನು ವಿವರಿಸಿ. ಇದು ಹೇಗೆ ಸಾಟಿ ವಿನಿಮಯ ಪದ್ಧತಿಯ ದೋಷಗಳನ್ನು ನಿವಾರಿಸಿತು ತಿಳಿಸಿ.
48. ಮಿತವ್ಯಯದ ವಿರೋಧಾಭಾಸವನ್ನು ಚರ್ಚಿಸಿರಿ.

## ಭಾಗ – ಇ

**VIII**. **ಕೆಳಗಿನ ಯಾವುದಾದರೂ ಎರಡು ಕಾರ್ಯಭಾರ ಮತ್ತು ನಿಯೋಜನೆ ಆಧಾರಿತ ಪ್ರಶ್ನೆಗಳಿಗೆ ಉತ್ತರಿಸಿ.** **2x5 =10**

49. ಒಬ್ಬ ಅನುಭೋಗಿಯು ಎರಡು ಸರಕುಗಳನ್ನು ಅನುಭೋಗಿಸಲು ಬಯಸುತ್ತಾಳೆ. ಬಾಳೆಹಣ್ಣಿನ ಬೆಲೆ ರೂ.5 ಮತ್ತು ಮಾವಿನ ಹಣ್ಣಿನ ಬೆಲೆ ರೂ. 10 ಆಗಿದ್ದು, ಅನುಭೋಗಿಯ ಆದಾಯ ರೂ. 40 ಆಗಿದೆ. ಈ ಕೆಳಗಿನವುಗಳಿಗೆ ಉತ್ತರಿಸಿ.
    (ಎ) ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚು ಮಾಡಿ ಎಷ್ಟು ಪ್ರಮಾಣದ ಬಾಳೆಹಣ್ಣನ್ನು ಅನುಭೋಗಿಸಬಹುದು?
    (ಬಿ) ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚು ಮಾಡಿ ಎಷ್ಟು ಪ್ರಮಾಣದ ಮಾವಿನ ಹಣ್ಣನ್ನು ಅನುಭೋಗಿಸಬಹುದು?

(ಸಿ) ಬಜೆಟ್ ರೇಖೆಯ ಇಳಿಜಾರು ಕೆಳಮುಖ ಅಥವಾ ಮೇಲ್ಮುಖವಾಗಿರುತ್ತದೆಯೇ?

(ಡಿ) ಬಜೆಟ್ ರೇಖೆಯ ಮೇಲಿನ ಎಲ್ಲಾ ಸಂಯೋಜನೆಗಳು ಅನುಭೋಗಿಯ ಆದಾಯಕ್ಕೆ ಸಮನಾಗಿರುತ್ತವೆಯೇ ಅಥವಾ ಇಲ್ಲವೇ?

(ಇ) ಒಂದು ಬಾಳೆಹಣ್ಣನ್ನು ಹೆಚ್ಚುವರಿಯಾಗಿ ಪಡೆಯಲು ಮಾವಿನ ಹಣ್ಣನ್ನು ಬಿಟ್ಟುಕೊಡಬೇಕಾಗುತ್ತದೆ. ಇದು ಸರಿಯೇ?

50. ಈ ಕೆಳಗಿನ ಕೋಷ್ಟಕದಲ್ಲಿ ಕಾಣೆಯಾದ ಉತ್ಪನ್ನಗಳನ್ನು ಕಂಡುಹಿಡಿಯಿರಿ.

| Factor 1 | TP | $MP_L$ | $AP_L$ |
|---|---|---|---|
| 0 | 0 | 0 | 0 |
| 1 | 10 | – | 10 |
| 2 | 24 | – | 12 |
| 3 | 40 | 16 | 13.33 |
| 4 | – | 10 | – |
| 5 | – | 6 | 11.2 |
| 6 | 57 | 1 | 9.5 |

**(ಅಂಧ ವಿದ್ಯಾರ್ಥಿಗಳಿಗೆ ಮಾತ್ರ)**

ಒಟ್ಟು ಉತ್ಪನ್ನ, ಸೀಮಾಂತ ಉತ್ಪನ್ನ, ಸರಾಸರಿ ಉತ್ಪನ್ನದ ಅರ್ಥವನ್ನು ವಿವರಿಸಿ.

51. ಅನಾಣ್ಯೀಕರಣ ಅಥವಾ ಹಣದ ಅಮಾನ್ಯೀಕರಣ (ನೋಟು ರದ್ಧತಿ) ದ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

****

**II PUC ECONOMICS**

**FOR REDUCED SYLLABUS 2020-21**

Time : 3 Hours 15 minutes **Model Question Paper-2** [Max. Marks: 100]

**Instruction: 1. Write the question numbers legibly in the margin.**

**2. Answer for a question should be continuous.**

## PART – A

**I. Choose the correct answer:** **5x1 =5**

1. The equation of budget line is

   (a) $p x + p_1 x_1 = M$ (b) $M = p_0 x_0 + p x$

   (c) $p_1 x_1 + p_2 x_2 = M$ (d) $Y=M x + C$

2. The product in a perfect competition are

   a) Heterogeneous products b) Homogeneous products

   c) Luxury goods d) Necessary goods

3. The year of Great Depression

   a) 1920 b) 1889 c) 1929 d) 2018

4. The value of GDP at the current prevailing prices is

   a) Real GDP b) GDP at factor cost

   c) Nominal GDP d) NDP

5. Value of MPC lies between

   a) 1 and 2 b) 0 and 1 c) 2 and 4 d) 0 and 0.5

**II. Fill in the blanks:** **5x1 =5**

6. Scarcity of resources give rise to ________
7. Want satisfying capacity of a commodity is ______
8. The point of minimum AVC where the SMC curves cuts the AVC curves is called ______
9. The net contribution made by a firm is called its ________
10. The principal motive for holding money is to carry out ________

**III. Match the following:** **5x1 =5**

11. A B

| | A | B |
|---|---|---|
| 1. | Complementary goods | a) Perfect information |
| 2. | LRAC | b) Non- Monetary exchange |
| 3. | Perfect competition | c) Long run Average cost |
| 4. | Domestic service | d) Y - C |
| 5. | Savings | e) Pen & Ink |

**IV. Answer the following question in a sentence/word. 5x1 =5**

12. What do you mean by cardinal utility analysis?
13. Give the meaning of super normal profit.
14. How do we get Personal Disposable Income?
15. What is Fiat Money?
16. Write the meaning of autonomous consumption.

## PART – B

**V. Answer any NINE of the following questions in four sentences each. 9x2 =18**

17. Distinguish between Micro and Macro Economics.
18. What is monotonic preference?
19. What do you mean by inferior goods? Give example?
20. What is Isoquant?
21. Write the meaning of opportunity cost with an example.
22. Give the meaning of price elasticity of supply and write its formula.
23. Name and write the meaning of two kinds of trade in external sector.
24. Distinguish between stock and flow. Give example.
25. What are the four factors of production? Mention their rewards.
26. Write the equation of $GDP_{MP}$ and $GDP_{FC}$.
27. Give the meaning of CRR and SLR.
28. State the credit control instruments of RBI.
29. Write the meaning of excess demand and deficient demand.
30. Give the meaning of investment multiplier. Write its formula.

## PART – C

**VI. Answer any SEVEN of the following questions in 12 sentences each. 7x4 =28**

31. Write a short note on a centrally planned economy.
32. Write the difference between total utility and marginal utility.
33. Briefly explain the budget set with the help of a diagram.

34. Write a brief note on return to scale.

35. Write a short note on profit maximization of a firm under the following conditions

a) P=MC b) MC must be non-decreasing at $q_0$

36. Explain the working of the economy of a capitalist country.

37. Write a note on externalities.

38. Explain the circular flow of income of an economy.

39. Illustrate unplanned accumulation and decumulation of inventories with an example.

40. Briefly explain the functions of RBI.

41. Briefly explain consumption function.

## PART – D

**VII Answer any FOUR of the following questions in 20 sentences each. 4x6 =24**

42. Explain the features of indifference curves with the help of diagrams.

43. Explain the optimal choice of consumer with the help of diagram.

44. A firm's SMC schedule is shown in the following table. TFC is Rs.100. find TVC, TC, AVC and SAC. Schedules of the firm.

| Q | 0 | 1 | 2 | 3 | 4 | 5 | 6 |
|---|---|---|---|---|---|---|---|
| SMC | -- | 500 | 300 | 200 | 300 | 500 | 800 |

45. Explain market supply curve with the help of diagram

46. Briefly explain the expenditure method of measuring GDP.

47. Explain the functions of money. How does money overcome the short comings of a barter system.

48. Discuss the Paradox of thrift.

## PART – E

**VIII. Answer any TWO of the following project oriented questions. 2x5 =10**

49. A consumer wants to consumes two goods. The Price of Bananas is Rs 5 and the price of mango is Rs.10 The consumer income is Rs 40.

a) How much Bananas can she consume if she spend her entire income on that good?

b) How much mangoes can she consume if she spend her entire income on that good?

c) Is the slope of budget line downward or up word?

d) Are the Bundles on the budget line equal to the consumer's income or not?

e) If you want to have more of Bananas you have to give up mangoes. Is it true?

50. Find the missing products in the following table.

| Factor 1 | TP | $MP_L$ | $AP_L$ |
|---|---|---|---|
| 0 | 0 | 0 | 0 |
| 1 | 10 | – | 10 |
| 2 | 24 | – | 12 |
| 3 | 40 | 16 | 13.33 |
| 4 | – | 10 | – |
| 5 | – | 6 | 11.2 |
| 6 | 57 | 1 | 9.5 |

(For blind students only)

Explain the meaning of TP, MP and AP)

51. Write a note on Demonetization.

****